ಮೇಡಂನ ನೋಡಬೇಕು' ಅಂತ ಹೇಳಿ ಬಾಗಿಲ ಕಡೆಗೆ ಕಣ್ಣುನೆಟ್ಟು ಕೂತಿದ್ದೆ. ನಿಧಾನವಾಗಿ ಹೆಜ್ಜೆಯಿಡುತ್ತ ಬಂದ ಪದ್ಮಾ ಅವರನ್ನು ನೋಡಿ ರಾಮಚಂದ್ರ ಶರ್ಮ ಅವರ 'ಸಪ್ತಪದಿ' ಕವನ ಸಂಕಲನದ ಮೊದಲ ಕವಿತೆ 'ನೀನೆ ದೀಪದ ಮನೆ'ಯ ಸಾಲುಗಳು 'ಒಡೆದ ಹಡಗಿಗೆ ನೀನೆ ದಡದ ದೀಪದ ಮನೆ ನಿನಗೇನುತಾನೇ ಕೊಡಲಿ, ಹೇಳಿಬಿಡು, ಹೆಣ್ಣೆ' ನೆನಪಾದವು.

ಮೃದು ಮಾತು, ತುಂಬು ನಗೆಯ ಹಿರಿಯರೊಂದಿಗೆ ಮಾತುಕತೆ ಮೊದಲಾಯಿತು. 'ಮೇಡಂ, ಹೀಗೇನೋ ಬರೆದಿರುವಿರಲ್ಲ ಅದನ್ನು ನೆನಪು ಮಾಡಿಕೊಂಡು ಹೇಳಿ' ಅಂತ ಕಾಡಿದಾಗ, 'ಅಯ್ಯೋ ನಿಂದೊಳ್ಳೆ ಕತೆಯಾಯ್ತಲ್ಲ ಮಗು. ಎಷ್ಟೊಂದು ವರ್ಷಗಳಾದವು, ಅದನ್ನು ಹೇಳು ಅಂದರೆ' ಅಂತ ನಗುತ್ತಲೇ ಮಾತಿಗೆ ತೊಡಗಿದರು. ಅವರೊಂದಿಗೆ ಮಾತು ಮುಗಿಸಿ ಹೊರಬಂದಾಗ 'ಸಪ್ತಪದಿ' ಸಂಕಲನದ ಕೆಲವು ಕವನಗಳನ್ನು ಓದಿದ ಅವರ ಧ್ವನಿ, ಆ ಪುಸ್ತಕ ಹಿಡಿದು ಕ್ಷಣ ಕಾಲ ಅವರು ಸುಮ್ಮನೆ ಕೂತದ್ದು, ಮಾತಿನ ನಡುವೆ ಹರಿಯುತ್ತಿದ್ದ ಆ ಮುಕ್ತ ನಗು ಮನಸ್ಸಿನಲ್ಲಿ ಅಚ್ಚಳಿಯದ ಚಿತ್ರವಾಗಿ ನಿಂತುಬಿಟ್ಟಿತು. 'ಸಪ್ತಪದಿ' ಸಂಕಲನದ 'ಫೋಟೊ ಆಲ್ಬಂ' ಕವನ ನೆನಪಾಗಿ ಕಾಡಿತ್ತು. ಪದ್ಮಾ–ರಾಮಚಂದ್ರ ಶರ್ಮ ಇಬ್ಬರ ಮುಖ, ನಗು ಒಂದೇ ತರಹ ಅನ್ನಿಸತೊಡಗಿತ್ತು.

ಮೈಸೂರಿನಲ್ಲಿ 1936ರಲ್ಲಿ ನಂಜುಡಯ್ಯ, ಚೆಲುವಮ್ಮ ದಂಪತಿಯ ಮೂರನೆಯ ಮಗಳಾಗಿ ಪದ್ಮಾ ಬೆಳವಾಡಿ ಹುಟ್ಟಿದರು. ಓದಿದ್ದು ಬೆಳೆದದ್ದು ಎಲ್ಲ ಮೈಸೂರಿನಲ್ಲಿ. ಬಿ.ಎ. ಆನರ್ಸ್ ಮುಗಿಸಿ ಇಂಗ್ಲಿಷ್ ಎಂ.ಎ. ಮಾಡಿ 1955ರಲ್ಲಿ ರಾಮಚಂದ್ರ ಶರ್ಮ ಅವರ ಮಡದಿಯಾದರು. ಇಥಿಯೋಪಿಯಾದಿಂದ ಮೊದಲಾದ ಶಿಕ್ಷಕ ವೃತ್ತಿಯನ್ನು ಇಂದಿಗೂ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಜಯನಗರದ ಶ್ರೀರಾಮ ಶಾಲೆಯಲ್ಲಿ ಪಾಠ ಮಾಡುತ್ತಿದ್ದಾರೆ.

ಅನುವಾದಿಸುವ ಖುಷಿಗೋ ಇಲ್ಲವೇ ಅನುವಾದಿಸುವ ಮೂಲಕ ತನ್ನ ಭಾಷೆಯ ಮುಖ್ಯ ಕೃತಿಯನ್ನು ಮತ್ತೊಂದು ಭಾಷೆಗೆ ತಲುಪಿಸಲೋ ಅನುವಾದಕ್ಕೆ ತೊಡಗಲಿಲ್ಲ. ಅನುವಾದದ ಅವಕಾಶಗಳು ತಾನಾಗಿ ತೆರೆದುಕೊಂಡಾಗ ಅದರಲ್ಲಿ ತೊಡಗಿಕೊಂಡರು. ಭಾಷೆಯ ಮೇಲಿನ ಹಿಡಿತ, ಸೂಕ್ಷ್ಮತೆಗಳನ್ನು ಹಿಡಿದಿಡುವ ಸಾಮರ್ಥ್ಯ ಅವರ ಅನುವಾದಕ್ಕೊಂದು ಹೊಳಪು ತಂದಿತು.

ಅವರು ಅನುವಾದಿಸಿರುವ **Listen Janamejaya** (ಕೇಳು ಜನಮೇಜಯ–ಶ್ರೀರಂಗ), **Carvalho, Men of Mystery** ಓದಲು ಸಿಕ್ಕಿತು. 'ಮೂಲ ಪಠ್ಯವೊಂದನ್ನು ಓದಿದಾಗ ಮನಸ್ಸಿಗೆ ಯಾವ ಭಾವ ಬರುತ್ತೋ ಅದೇ ಭಾವನೆ ಅನುವಾದವನ್ನು ಓದಿದಾಗಲೂ ಬರಬೇಕು' ಎಂದು ಅವರು ಹೇಳಿದ ಮಾತು ಅವರ 'ಕರ್ವಾಲೊ' ಅನುವಾದವನ್ನು ಓದಿದಾಗ ನಿಜವೆನ್ನಿಸುತ್ತದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಕರ್ವಾಲೊ' (**Carvalho**), 'ಚಿದಂಬರ ರಹಸ್ಯ' (**Man of Mystery**), ಶ್ರೀರಂಗರ 'ಕೇಳು ಜನಮೇಜಯ' (**Listen Janamejaya**), ಚಂದ್ರಶೇಖರ ಕಂಬಾರರ 'ಸಾಂಬಶಿವ ಪ್ರಹಸನ' (**Samba Shiva Prahasana**), ಕನಕದಾಸರ 'ಮೋಹನತರಂಗಿಣಿ' ಹೀಗೆ ಹಲವು ಮಹತ್ವದ ಕೃತಿಗಳನ್ನು ಅವರು ಇಂಗ್ಲಿಷಿಗೆ ಅನುವಾದಿಸಿದ್ದಾರೆ. ಶರ್ಮ ಅವರೊಂದಿಗೆ 'ಕಾನೂರು ಹೆಗ್ಗಡಿತಿ' (**House of Kanuru**), ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 'ಚಿಕವೀರ ರಾಜೇಂದ್ರ' (**Chikaveera Rajendra**), ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' (**Return to Earth**), **Katha Prize stories, Cavery to Godavari, The boy who talked to trees, Shadow of Tigers, Home and away** ಸೇರಿದಂತೆ ಹಲವು ಕತೆಗಳನ್ನು ಅನುವಾದಿಸಿದ್ದಾರೆ.

ತಮ್ಮ ಅನುವಾದದ ಕೃಷಿಗಾಗಿ ಸಾಹಿತ್ಯ ಅಕಾಡೆಮಿ, ಕುವೆಂಪು ಭಾಷಾ ಭಾರತಿಯ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ.